**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1251/2021**

ಪಿ.ಡಬ್ಲ್ಯೂಃ 6

ಸಿ.ಡಬ್ಲ್ಯೂಃ 6

ಸಾಕ್ಷಿದಾರರ ಹೆಸರು : ಲಾಲ್ಯನಾಯ್ಕ

ತಂದೆಯ ಹೆಸರುಃ ಃ ಭದ್ಯನಾಯ್ಕ

ವಯಸ್ಸು : **52 ವರ್ಷ**

ಉದ್ಯೋಗ : ವ್ಯವಸಾಯ

ವಾಸಸ್ಥಳ : ಕರಕುಚ್ಚಿ

**ದಿನಾಂಕ: 22-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

2021 ನೇ ಸಾಲಿನಲ್ಲಿ ಕರಕುಚ್ಚಿಯಲ್ಲಿರುವ ಮಂಜುನಾಥ ಆಗ್ರೋಕೇಂದ್ರ ಅಂಗಡಿಯಲ್ಲಿ ರಾತ್ರಿ ಕಳ್ಳತನವಾಗಿರುವ ವಿಚಾರದ ಬಗ್ಗೆ ಬೆಳಗ್ಗೆ ನಾನು ಹಾಗೂ ಚಾಸ-7 ರವರು ಪೋಲೀಸರು ಮಹಜರ್ ಮಾಡುವ ಸಂದರ್ಭದಲ್ಲಿ ಹೋಗಿ ನೋಡಿದ್ದು, ಸದರಿ ಅಂಗಡಿಯಲ್ಲಿ ಸಿಮೇಂಟ್ ಸೀಟ್ ಅನ್ನು ತೆಗೆದು ಅಂಗಡಿಯ ಒಳಗೆ ಬಂದು ಹಣವನ್ನು ಕಳ್ಳತನ ಮಾಡಿರುತ್ತಾರೆ. ಕಳ್ಳತನವನ್ನು ಯಾರು ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಎಷ್ಟು ಹಣವನ್ನು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **02-07-2020** ರಂದು ಬೆಳಗ್ಗೆ **08-30** ಗಂಟೆಯ ಸಮಯದಲ್ಲಿ ರಾಮನಾಯ್ಕ ರವರ ಅಂಗಡಿಯ ಮುಂದೆ ಜನರು ನಿಂತಿದ್ದು ನಾನು ಹೋಗಿ ರಾಮನಾಯ್ಕರವರನ್ನು ವಿಚಾರ ಮಾಡಿ ತಾನು **01-07-2020** ರಂದು ಅಂಗಡಿಯ ವ್ಯವಹಾರವನ್ನು ಮುಗಿಸಿಕೊಂಡು ರಾತ್ರಿ **09-00** ಗಂಟೆ ಸಮಯದಲ್ಲಿ ಬೀಗ ಹಾಕಿಕೊಂಡು ಮನೆಯ ಹೋಗಿದ್ದು ಬೆಳಗ್ಗೆ ಅಂಗಡಿಯ ಬಾಗಿಲು ತೆಗದು

ನೋಡಿದಾಗ ನೆನ್ನೆ ಆದ ವ್ಯವಹಾರಾದ ಹಣ **80,0000** ಹಣ ಯಾರೋ ಅಂಗಡಿಯ ಮೇಲ್ಭಾಗದ ಸೀಟನ್ನು ತೆಗೆದು ತನ್ನ ಅಂಗಡಿಯ ಡ್ರಾ ದಲ್ಲಿ ಇಟ್ಟಿರುವ **80,0000** ಹಣವನ್ನು ಕಳ್ಳತನ ಆಗಿರುವ ವಿಚಾರ ನನ್ನ ಬಳಿ ಹೇಳಿರುತ್ತಾರೆ ಎಂದರೆ ಸರಿ. ಈ ವಿಚಾರದ ಬಗ್ಗೆ ನಾನು ಪೋಲೀಸರು ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು : ಆರೋಪಿ ಪರ ಬಿ ಟಿ ಜಿ ವಕೀಲರಿಂದ.</u>**

ರಾಮನಾಯ್ಕರವರು ನಮ್ಮ ಜನಾಂಗದವರಾಗಿದ್ದು, ಒಂದೇ ಊರು ಆಗಿರುತ್ತದೆ ಎಂದರೆ ಸರಿ. ಅವರಿಗೂ ನಿಮಗೂ ಪರಿಚಯವಿರುತ್ತದೆ ಎಂದರೆ ಸರಿ. ರಾಮನಾಯ್ಕ ರವರ ಅಂಗಡಿಯಲ್ಲಿ ಕಳ್ಳತನವಾಗಿರುತ್ತದೆ ನೀವು ಹೋಗಿ ನೋಡಿದ್ದೀರಾ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಪೋಲೀಸರು ಮುಂದು ನೀವು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಾದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**